ಅ) ಮಂಗಳೂರು ತಾಲ್ಲೂಕಿನ ಸೂರಿಂಜೆಯ ಸರಕಾರಿ ಪ್ರೌಢ ಶಾಲೆಗೆ ಮಂಜೂರು ಮಾಡಲಾಗಿರುವ ಸ್ಥಳದ ವಿಸ್ತೀರ್ಣ ಎಷ್ಟು ?

ಆ) ಸದರಿ ಶಾಲೆಯ ವ್ಯಾಪ್ತಿಗೆ ಬರುವ ಭೂಮಿಯನ್ನು ನಿಗಧಿಪಡಿಸಿ ಶಾಲೆಯ ಸ್ವಾಧೀನಕ್ಕೆ ಕೊಡುವ ಕಾರ್ಯವನ್ನು ಕ್ಷಿಪ್ರವಧಿಗಿ ಸರಕಾರದವರು ಮಾಡುವುದೇ ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) 1.18 ಎಕರೆ ಜಮೀನು ಮಂಜೂರು ಮಾಡಲಾಗಿದೆ.

ಆ) ಸ್ವಾಧೀನಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ವಿವಿಧ ಆಸ್ಪತ್ರೆಗಳಲ್ಲಿರುವ ವೈದ್ಯರ ಕೊರತೆ.

391 - ಶ್ರೀ ಡಾ. ಎಂ.ಪಿ. ಕರ್ಕಿ (ಕುಮುಟ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ರಾಜ್ಯದಲ್ಲಿ ವಿವಿಧ ಆಸ್ಪತ್ರೆ ನಡೆಸಲು ಬೇಕಾಗದ ವೈದ್ಯರ ಸಂಖ್ಯೆ ಎಷ್ಟು ? ಈಗಿರುವ ಕೊರತೆ ಎಷ್ಟು ?

2) ಉತ್ತರ ಕನ್ನಡ ಜಿಲ್ಲೆಯಲ್ಲಿ ಎಷ್ಟು ವೈದ್ಯರ ಕೊರತೆಯಿದೆ ?

3) ವೈದ್ಯರೇ ಇಲ್ಲದ ಆಸ್ಪತ್ರೆಗಳೆಷ್ಟು ?

4) ಅದನ್ನು ಯಾವಾಗ ತುಂಬಲಾಗುವುದು ಹಾಗೂ ಅಸುಸರಿಸುವ ವಿಧಾನಗಳೇನು ?

ಶ್ರೀ ಎಂ. ಪಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

1) ವಿವಿಧ ಆಸ್ಪತ್ರೆ ನಡೆಸಲು ಬೇಕಾದ ವೈದ್ಯರ ಸಂಖ್ಯೆ: 4130. ಈಗ 608 ವೈದ್ಯರುಗಳ ಕೊರತೆ ಇದೆ.

2) ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು 43 ಮಂದಿ ವೈದ್ಯರ ಕೊರತೆ ಇದೆ.

3) 14 ಆಸ್ಪತ್ರೆಗಳಲ್ಲಿ ವೈದ್ಯರು ಇರುವುದಿಲ್ಲ.

4) ಈ ಖಾಲಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ವೈದ್ಯರುಗಳನ್ನು ನೇಮಕ ಮಾಡುವ ಮೂಲಕ ತುಂಬಲಾಗುತ್ತಿದೆ. ಹಾಗೂ ಕರ್ನಾಟಕ ಲೋಕಸೇವಾ ಆಯೋಗದ ಮೂಲಕ 400 ವೈದ್ಯರ ಹುದ್ದೆಗಳನ್ನು ತುಂಬಲು ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಕೋರಲಾಗಿದೆ. ಆಯ್ಕೆ ಪಟ್ಟಿ ಬಂದ ಕೂಡಲೇ ಖಾಲಿ ಹುದ್ದೆಗಳನ್ನು ತುಂಬಲಾಗುತ್ತದೆ.

ಅರೆಕಾಲಿಕ ಉಪನ್ಯಾಸಕರನ್ನು ಖಾಯಂಗೊಳಿಸುವ ಬಗ್ಗೆ.

392 - ಡಾ. ಎಂ.ಪಿ. ಕರ್ಕಿ (ಕುಮುಟಾ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅರೆಕಾಲಿಕ ಉಪನ್ಯಾಸಕರುಗಳ ಇನ್ನೂ ಉಳಿದ ಸ್ಟಾಪ್ ಗ್ರೇಡ್ ಉಪನ್ಯಾಸಕರನ್ನು ಖಾಯಂ ಮಾಡಲು ಸರ್ಕಾರದ ನಿಲುವೇನು ?

ಆ) ಅವರ ಸೇವೆಯನ್ನು ಬೇರೆ ರೀತಿಯಲ್ಲಿ ಉಪಯೋಗಿಸಲು ತೀರ್ಮಾನಿಸಲಾಗಿದೆಯೇ ಹಾಗಿದ್ದಲ್ಲಿ ಯಾವ ರೀತಿಯಲ್ಲಿ ಉಪಯೋಗಿಸಿಕೊಳ್ಳಲಾಗುವುದು.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ) ಅರ್ಹ ಅರೆಕಾಲಿಕ ಉಪನ್ಯಾಸಕರನ್ನು ಖಾಯಂಗೊಳಿಸಲು ಸರ್ಕಾರವು ತಾತ್ವಿಕವಾಗಿ ಒಪ್ಪಿದ್ದು ಖಾಯಂಗೊಳಿಸುವ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದೆ.

ಇನ್ನು ಉಳಿದಿರುವ ಸ್ಟಾಪ್ ಗ್ಯಾಪ್ ಉಪನ್ಯಾಸಕರ ಸಮಸ್ಯೆ ಬಗ್ಗೆ ರಚಿಸಲಾಗಿದ್ದ ಸಮಿತಿಯ ವರದಿ ಸ್ವೀಕೃತವಾಗಿದ್ದು ವರದಿಯಲ್ಲಿನ ಶಿಫಾರಸ್ಸುಗಳು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಕಾನೂನು ಕಾಲೇಜುಗಳಿಗೆ ಅನುದಾನ

393 - ಡಾ. ಎಂ.ಪಿ. ಕರ್ಕಿ(ಕುಮುಟಾ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಕರ್ನಾಟಕದಲ್ಲಿ ಇರುವ ಕಾನೂನು ಕಾಲೇಜುಗಳೆಷ್ಟು.

2) ಸರ್ಕಾರಿ ವಲಯದಲ್ಲಿನ ಕಾನೂನು ಕಾಲೇಜುಗಳೆಷ್ಟು ?

3) ಅನುದಾನಿತ ಕಾಲೇಜುಗಳು ಹಾಗೂ ಅನುದಾನಕ್ಕೆ ಶಿಫಾರಸ್ಸಾದ ಕಾಲೇಜುಗಳೆಷ್ಟು ?

4) ನಾಗರಭಾವಿಯಲ್ಲಿ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾಕ್ಕೆ ಸರ್ಕಾರ ಕೊಡುವ ಅನುದಾನವೆಷ್ಟು ?

5) ಈ ಕಾಲೇಜಿನಿಂದ ಕರ್ನಾಟಕದ ವಿದ್ಯಾರ್ಥಿಗಳಿಗೆ ಎಷ್ಟು ಉಪಯೋಗವಾಗಿದೆ ?

6) ಕಾನೂನು ಶಿಕ್ಷಣ ನಿರುಪಯುಕ್ತವೆಂದು ಸರ್ಕಾರ ಭಾವಿಸಿದೆಯೇ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

1) 61.

2) ಇಲ್ಲ.

3) 08 ಯಾವುದೇ ಹೊಸ ಕಾಲೇಜುಗಳನ್ನು ಶಿಫಾರಸ್ಸು ಮಾಡಿಲ್ಲ.

4) ವಾರ್ಷಿಕವಾಗಿ 10 ಲಕ್ಷ ರೂ.ಗಳು.

5) ಸರಾಸರಿ ಶೇಕಡ 35 ರಷ್ಟು

6) ಇಲ್ಲ.